# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ , ಕೇಂದ್ರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002.

*******************************************************************************

ಸಂ: ಆಯುಕ್ತರು/ಪಿ.ಆರ್/318/2020-21 ದಿನಾಂಕ: 01.02.2021.

3/2/2021.

## ಕಛೇರಿ ಆದೇಶ

**ವಿಷಯ:-** ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಆರ್ಥಿಕ ಪ್ರತ್ಯೋಜನೆಗಳನ್ನು ಮಾರ್ಪಾಡು ಮಾಡುವ ಬಗ್ಗೆ.

**ಉಲ್ಲೇಖ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘ (ನೋಂ) ರವರು ಸಲ್ಲಿಸಿರುವ ಮನವಿ ಪತ್ರದ ದಿನಾಂಕ: 27-01-2021.

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ತಮ್ಮ ಪ್ರಮುಖ ಸಮಸ್ಯೆಗಳು/ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಿದ್ದು, ಈ ಕೆಳಕಂಡಂತೆ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

1. ಸರ್ಕಾರದ ಆದೇಶ ಸಂಖ್ಯೆ ಆಇ 675 ವೆಚ್ಚ-12/2020, ಬೆಂಗಳೂರು, ದಿನಾಂಕ: 22.12.2020 ರೀತ್ಯ ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಗುತ್ತಿಗೆದಾರರು ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್‌ಗಳನ್ನು ಸ್ಪರ್ಧಾತ್ಮಕವಾಗಿ ಭಾಗವಹಿಸಲು ಅನುಕೂಲವಾಗುವಂತೆ ಸರ್ಕಾರಕ್ಕೆ ಸ್ಪರ್ಧಾತ್ಮಕ ದರ ಪಡೆಯುವ ಹಿತದೃಷ್ಟಿಯಿಂದ ಸಾರ್ವಜನಿಕ ಸಂಗ್ರಹಣಾ ಪ್ರಾಧಿಕಾರಗಳಿಂದ ಪಡೆಯಲಾಗುವ ಇ.ಎಂ.ಡಿ, ಭದ್ರತಾ ಠೇವಣಿ ಮತ್ತು ಹೆಚ್ಚುವರಿ ಭದ್ರತಾ ಠೇವಣಿ ಷರತ್ತುಗಳಲ್ಲಿ ಕೆಲವೊಂದು ರಿಯಾಯಿತಿಗಳನ್ನು ನೀಡಲಾಗಿರುತ್ತದೆ. ಅದರಂತೆ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಈ ಕೆಳಕಂಡಂತೆ ಆದೇಶಿಸಿದೆ.

   **ಹಾಲಿ ಚಾಲ್ತಿಯಲ್ಲಿರುವ ಎಲ್ಲಾ ಒಪ್ಪಂದಗಳಿಗೂ 3% ಭದ್ರತಾ ಠೇವಣಿಯನ್ನು** ಪಡೆದು ಈ ಹಿಂದೆ ಸಲ್ಲಿಸಿರುವ 5% ಭದ್ರತಾ ಠೇವಣಿಯನ್ನು ಹಿಂದುರುಗಿಸಬಹುದಾಗಿರುತ್ತದೆ ಹಾಗೂ ದಿನಾಂಕ:31-12-2021 ರವರೆಗೆ ಆಹ್ವಾನಿಸುವ ಎಲ್ಲಾ ಟೆಂಡರ್‌ಗಳಿಗೂ ಮತ್ತು ಇತರೆ ಕೆ.ಟಿ.ಪಿ.ಪಿ ವಿನಾಯಿತಿ ಪಡೆಯುವ ಕಾಮಗಾರಿಗಳಿಗೆ 3% ಭದ್ರತಾ ಠೇವಣಿಯನ್ನು ನಿಗಧಿಪಡಿಸುವುದು. ಉಳಿದಂತೆ **ಕಛೇರಿ ಆದೇಶ ಸಂಖ್ಯೆ:ಆಯುಕ್ತರು/ಪಿಆರ್/E-9251/2020-21, ದಿನಾಂಕ: 30-01-2021. ರನ್ವಯ ಹಾಗೂ ಮೇಲಿನ ಸರ್ಕಾರದ ಆದೇಶದಲ್ಲಿರುವ ಎಲ್ಲಾ ನಿಬಂಧನೆಗಳನ್ನು ಯಥಾಸ್ಥಿತಿಯಂತೆ ಪಾಲಿಸುವುದು.**

2. Standard bid tender document ರ ನಿಯಮಗಳನ್ವಯ ಎಲ್ಲಾ ನಿರ್ವಹಣಾ ಕಾಮಗಾರಿಗಳಿಗೆ (Repair, Renovation and Maintenance Works) ಮಾತ್ರ **ದೋಷ ಹೊಣೆಗಾರಿಕೆ** ಅವಧಿ (DLP) ಅವಧಿಯನ್ನು 1 ವರ್ಷದ ಅವಧಿಗೆ ನಿಗಧಿಪಡಿಸಲಾಗಿದೆ. ಬಂಡವಾಳ ಕಾಮಗಾರಿಗಳಿಗೆ (Capital Works) **ದೋಷ ಹೊಣೆಗಾರಿಕೆ** (DLP) ಅವಧಿಯನ್ನು ಕನಿಷ್ಠ 3 ವರ್ಷಗಳು ಅಥವಾ ಆಯಾ ಕಾಮಗಾರಿಗಳ ಅನುಗುಣವಾಗಿ ತಾಂತ್ರಿಕ ಮಂಜೂರಾತಿ ನೀಡುವ ಪ್ರಾಧಿಕಾರದ ಅಧಿಕಾರಕ್ಕೆ ನೀಡಲಾಗಿದೆ.

3. ರೂ.100.00 ಲಕ್ಷಗಳ ಕಾಮಗಾರಿಗಳ ಟೆಂಡರ್ ಅನುಮೋದನೆಯನ್ನು ಸರಳೀಕರಣಗೊಳಿಸುವ ಸಂಬಂಧ ಈ ಕಛೇರಿಯಿಂದ ಅಧಿಕಾರ ಪ್ರತ್ಯಾಯೋಜನೆ ಮಾಡಿರುವ ನಡವಳಿಗಳ ಸಂಖ್ಯೆ: 394/19-2020, ದಿನಾಂಕ: 25-09-2019 ರಲ್ಲಿ ಪುಟ-16 ಟೆಂಡರ್ ಈ ಕೆಳಕಂಡಂತೆ ಮಾರ್ಪಡಿಸಲಾಗಿದೆ.

| | | |
|---|---|---|
| ಹಾಲಿ ಟೆಂಡರ್ ಅನುಮೋದಿಸುವ ಪ್ರಾಧಿಕಾರ ಮತ್ತು ಆರ್ಥಿಕ ಅಧಿಕಾರದ ಮಿತಿ | ಶೇ. 5% ರಷ್ಟು ಸಿಎಸ್‌ಆರ್ ದರಗಳವರೆಗಿನ ಟೆಂಡರ್ ಪ್ರೀಮಿಯಂ ಒಳಗೊಂಡಂತೆ ರೂ. 50.00 ಲಕ್ಷಗಳು ಮೀರದಂತಹ ಟೆಂಡರ್‌ಗಳು | ಮುಖ್ಯ ಅಭಿಯಂತರರು |
| ಮಾರ್ಪಾಡಿಸಿದ ಟೆಂಡರ್ ಅನುಮೋದಿಸುವ ಪ್ರಾಧಿಕಾರ ಮತ್ತು ಆರ್ಥಿಕ ಅಧಿಕಾರದ ಮಿತಿ | ಟೆಂಡರ್ ಪ್ರೀಮಿಯಂ ಸೇರಿದಂತೆ ಒಟ್ಟು 100.00 ಲಕ್ಷಗಳು ವರೆಗಿನ (ಟೆಂಡರ್ ಪ್ರೀಮಿಯಂ ಶೇ. 5% ರಷ್ಟು ಮೀರದಂತೆ) ಮೀರದಂತಹ ಟೆಂಡರ್‌ಗಳು. | ಮುಖ್ಯ ಅಭಿಯಂತರರು |

4. ಟೆಂಡರ್ ಅವಧಿಯ ಕಾಲವಿಳಂಭ ವಿಸ್ತರಣೆ (Time Extension) ಕುರಿತಂತೆ ಅಧಿಕಾರ ಪ್ರತ್ಯಾಯೋಜನೆಯಾಗಿರುವ ಅಧಿಕಾರಿಗಳು ಯಾವುದೇ ರೀತಿಯ ವಿಳಂಭ ದೋರಣೆ ಅನುಸರಿಸದೇ ನಿಯಮಿತ ಕಾಲಾವಧಿ ಒಳಗಾಗಿ ನಿಯಮಾನುಸಾರ ಟೆಂಡರ್ ಅವಧಿಯ ಕಾಲವಿಳಂಭ ವಿಸ್ತರಣೆ ಮಾಡಲು ದಂಡ ಸಹಿತ ಅಥವಾ ದಂಡರಹಿತ (Time Extension) ಈ ಕೆಳಕಂಡಂತೆ ಅಧಿಕಾರ ಪ್ರತ್ಯಾಯೋಜನೆ ಮಾಡಿದೆ.

1.ಕಾರ್ಯಪಾಲಕ ಅಭಿಯಂತರರು :-
ಗುತ್ತಿಗೆ ಅವಧಿಯ ಶೇ. 50% ರಷ್ಟು ಹೆಚ್ಚುವರಿ ಕಾಲಾವಧಿ

2.ಅಧೀಕ್ಷಕ ಅಭಿಯಂತರರು :-
ಗುತ್ತಿಗೆ ಅವಧಿಯ ಶೇ 75% ರಷ್ಟು ಹೆಚ್ಚುವರಿ ಕಾಲಾವಧಿ

3.ಮುಖ್ಯ ಅಭಿಯಂತರರು :-
ಗುತ್ತಿಗೆ ಅವಧಿಯ ಶೇ 75% ರಷ್ಟು ಮೀರಿದ ಹೆಚ್ಚುವರಿ ಕಾಲಾವಧಿ

ಇನ್ನುಳಿದಂತೆ ಹಾಲಿ ಚಾಲ್ತಿಯಲ್ಲಿರುವ ಅಧಿಕಾರ ಪ್ರತ್ಯೋಜನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮೇಲಿನ ಆದೇಶವನ್ನು ತಕ್ಷಣದಿಂದ ಪಾಲಿಸಲು ಆದೇಶಿಸಿದೆ.

ಆಯುಕ್ತರು 4/2/2021
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-
1. ಮಾನ್ಯ ಆಡಳಿತಗಾರರ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಹಣಕಾಸು/ಯೋಜನೆ/ಆಡಳಿತ/ಕಲ್ಯಾಣ/ಕಂದಾಯ/ಶಿಕ್ಷಣ/ಆರೋಗ್ಯ/ಆಸ್ತಿಗಳು/ಘನತ್ಯಾಜ್ಯ ನಿರ್ವಹಣೆ/ಮಾರುಕಟ್ಟೆ ರವರ ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ವಲಯದ ಆಯುಕ್ತರುಗಳ ಸೂಕ್ತ ಕ್ರಮಕ್ಕಾಗಿ.
4. ಪ್ರಧಾನ ಅಭಿಯಂತರರು ರವರಿಗೆ ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ಅಪರ / ಜಂಟಿ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ದಾಸರಹಳ್ಳಿ, ರಾ.ರಾ.ನಗರ ಮತ್ತು ಯಲಹಂಕ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ಜಂಟಿ ಆಯುಕ್ತರು ಹಣಕಾಸು/ಘನತ್ಯಾಜ್ಯ ನಿರ್ವಹಣೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
7. ಮುಖ್ಯ ಅಭಿಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ಮಹದೇವಪುರ, ದಾಸರಹಳ್ಳಿ, ರಾ.ರಾ.ನಗರ ಯಲಹಂಕ, ಯೋಜನೆ-ಕೇಂದ್ರ, ರಸ್ತೆ ಮೂಲಭೂತ ಸೌಕರ್ಯ, ಕೆರೆಗಳು, ಬೃಹತ್ ನೀರುಗಾಲುವೆ, ಘನತ್ಯಾಜ್ಯ ನಿರ್ವಹಣೆ, ಟಿವಿಸಿಸಿ ಮತ್ತು ಓ.ಎಫ್.ಸಿ) ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
8. ಮುಖ್ಯ ಲೆಕ್ಕಾಧಿಕಾರಿಯವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
9. ಮುಖ್ಯ ಆರ್ಥಿಕಾಧಿಕಾರಿಯವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಸದರಿ ಆದೇಶವನ್ನು ಪಾಲಿಕೆ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
11. ಕಛೇರಿ ಪ್ರತಿ.